# ತೊಗಲು ಗೊಂಬೆಗಳಿಗೆ ಮರುಜೀವ

**ಅತ್ಯಂತ ಪ್ರಾಚೀನ ಪಾರಂಪರಿಕ ಕಲೆ ತೊಗಲುಗೊಂಬೆಯನ್ನು ನಿರುಪಯುಕ್ತ ವಸ್ತುಗಳಾದ ಕಾಗದ, ಕಾರ್ಡ್‌ಬೋರ್ಡ್ ಬಳಸಿ ಮಾಡಿರುವ ರೀತಿ ಸೃಜನಶೀಲತೆಗೆ ಸಾಕ್ಷಿಯಾಗಿದೆ. ಬೆಂಗಳೂರಿನ ಚಿತ್ರಕಲಾ ಪರಿಷತ್ತಿನ ಕಲಾವಿಭಾಗದ ವಿದ್ಯಾರ್ಥಿಗಳು ತೊಗಲುಗೊಂಬೆಗಳನ್ನು ರಚಿಸಿ ನೋಡುಗರ ಮನತಣಿಸಿದ್ದಾರೆ.**

**■ ಬಳಕೂರು ವಿ.ಎಸ್. ನಾಯಕ**

ಕುದುರೆಯನೇರಿ ಸಾಗುತ್ತಿರುವ ಮಹಾರಾಜ, ಹಿಂದಿನ ಕಾಲದ ಜನರ ವೇಷಭೂಷಣ, ತಲೆಯ ಮೇಲೆ ಬಿಂದಿಗೆ ಹಿಡಿದು ಸಾಗುತ್ತಿರುವ ಮಹಿಳೆಯರು, ಗಂಡಭೇರುಂಡ, ಹಳ್ಳಿಯ ಜನರ ಸಂಸ್ಕೃತಿಯನ್ನು ಬಿಂಬಿಸುವ ಚಿತ್ರ... ಹೀಗೆ ಅಂದದಲ್ಲಿ ಒಂದಕ್ಕಿಂತ ಒಂದು ಮಿಗಿಲಾದ ಈ ಎಲ್ಲ ಚಿತ್ರಣಗಳು ಪಡಿಮೂಡಿದ್ದು ತೊಗಲುಗೊಂಬೆಗಳ ರೂಪದಲ್ಲಿ.

ಬೆಂಗಳೂರಿನ ಚಿತ್ರಕಲಾ ಪರಿಷತ್ತಿನ ವಿದ್ಯಾರ್ಥಿಗಳ ಕೈಗಲ್ಲಿ ಅರಳಿದ ಈ ಅತ್ಯಾಕರ್ಷಕ ತೊಗಲು ಗೊಂಬೆಗಳು ನೋಡುಗರನ್ನು ತಕ್ಷಣ ಸೆಳೆಯುತ್ತವೆ. ಪರಂಪರೆಯಿಂದಲೂ ಬಂದ ವಿಶಿಷ್ಟ ತೊಗಲು ಗೊಂಬೆ ಕಲೆ ಈಗೀಗ ನಶಿಸಿಹೋಗುತ್ತಿದೆ ಎಂಬ ಮಾತು ಕೇಳಿಬರುತ್ತಿರುವಾಗ ಚಿತ್ರಕಲಾ ವಿದ್ಯಾರ್ಥಿಗಳು ಈ ಗೊಂಬೆ ಕಲೆಯನ್ನು ಜೀವಂತವಾಗಿಸಿದ್ದಾರೆ. ಇದು ವಿದ್ಯಾರ್ಥಿಗಳ ಸೃಜನಶೀಲ ಗುಣ ಹಾಗೂ ಕೈಚಳಕವನ್ನು ಬಿಂಬಿಸುತ್ತದೆ.

ಸಾಮಾನ್ಯವಾಗಿ ತೊಗಲು ಗೊಂಬೆಯನ್ನು ಚರ್ಮದಿಂದ ಮಾಡುವುದು ವಾಡಿಕೆ. ಆದರೆ ಇಲ್ಲಿ ಪಡಿಮೂಡಿರುವ ಗೊಂಬೆಗಳಾವುವೂ ಯಾವುದೇ ರೀತಿಯ ಚರ್ಮದಿಂದ ಮಾಡಿದ ಕಲಾಕೃತಿಗಳಲ್ಲ. ಅದೇ ರೀತಿ ಯಥಾವತ್ತಾಗಿ ಚಿತ್ರಿಸಿರುವ ಈ ಗೊಂಬೆಗಳು ಹಾಳೆಗಳು ಮತ್ತು ಕಾರ್ಡ್‌ಬೋಡ್ ಶೀಟ್‌ಗಳಲ್ಲಿ ರಚಿಸಿರುವುದು. ಈ ಮೂಲಕ ಪ್ರಾಚೀನ ಕಲೆಗೆ ಆಧುನಿಕ ಸ್ಪರ್ಶವನ್ನೂ ನೀಡಿದ ಹೆಚ್ಚುಗಾರಿಕೆ ಈ ಗೊಂಬೆ ಕಲಾಕೃತಿಗಳಲ್ಲಿ ಎದ್ದುಕಾಣುತ್ತದೆ.

ಈ ಹಿಂದೆ ನಮ್ಮ ಪ್ರಾಚೀನರು ಪ್ರಾಣಿ ಪಕ್ಷಿ, ನಿಸರ್ಗ ಇವೆಲ್ಲವುಗಳನ್ನು ಪ್ರೀತಿಸುತ್ತಿದ್ದರು ಅಲ್ಲದೆ ದೇವರೆಂದು ಆರಾಧಿಸುತ್ತಿದ್ದರು. ಅಷ್ಟೊಂದು ನಂಬಿಕೆಯನ್ನು ಹೊಂದಿದ್ದ ಜನ ಪ್ರಾಣಿ, ಪಕ್ಷಿಗಳು ಸತ್ತ ಮೇಲೆ ಅವುಗಳ ಚರ್ಮವನ್ನು ಬಳಸಿ ಅದೇ ಪರಿಕಲ್ಪನೆಯಲ್ಲಿ ಕಲಾಕೃತಿಗಳನ್ನು ರೂಪಿಸುತ್ತಿದ್ದರು. ಚಿತ್ರಕಲಾ ಪರಿಷತ್ತಿನ ವಿದ್ಯಾರ್ಥಿಗಳು ಅವೆಲ್ಲವನ್ನೂ ಆಧುನಿಕ ಪರಿಕರ ಬಳಸಿ ರಚಿಸಿದ ಕಲಾಕೃತಿಗಳು ಈಗ ಇಲ್ಲಿನ ಗ್ಯಾಲರಿಗಳಲ್ಲಿ ರಾರಾಜಿಸುತ್ತಿವೆ. ಮಕ್ಕಳ ಕಲಾಪ್ರಜ್ಞೆ ಮತ್ತು ಸೃಜನಶೀಲತೆ ಇತರ ಮಕ್ಕಳಿಗೆ ಮಾದರಿ. ಶಾಲಾ ಮಕ್ಕಳಿಗೆ ಪರೀಕ್ಷೆ ಮುಗಿದು ಬೇಸಿಗೆ ಶಿಬಿರ ಏರ್ಪಡಿಸುವಾಗ ಇಂತಹ ತೊಗಲುಗೊಂಬೆ ಮಾಡುವ ವಿಧಾನದ ಬಗ್ಗೆ ತರಬೇತಿ ನೀಡಿದರೆ ನಶಿಸಿ ಹೋಗಿದೆ ಎನ್ನಲಾಗುವ ಈ ಕಲೆ ಮತ್ತೆ ಜೀವಸ್ವರೂಪ ಪಡೆದೀತು. ■



